ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: **"ಗ್ರಾಮೀಣ ನಿವೇಶನ ಯೋಜನೆ"** ಯನ್ನು ಮಾರ್ಪಡಿಸಿ **"ಇಂದಿರಾ ಗ್ರಾಮೀಣ ವಸತಿ ನಿವೇಶನಗಳ ಯೋಜನೆ"** ಎಂಬ ನೂತನ ನಾಮಾಂಕಿತದಡಿ ಜಾರಿಗೊಳಿಸುವ ಹಾಗೂ ಈ ಯೋಜನೆಯಡಿ ಜಮೀನಿನ ಭೂಮಾಲೀಕರಿಗೆ 60:40 ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೀಡುವ ಕುರಿತು.

–*–

ಓದಲಾಗಿದೆ:

1. 2017–18ನೇ ಸಾಲಿನ ಆಯವ್ಯಯದ ಭಾಷಣದ ಕಂಡಿಕೆ 233ರ ಘೋಷಣೆ.
2. ಸರ್ಕಾರದ ಆದೇಶ ಸಂಖ್ಯೆ: ವಇ 65 ಹೆಚ್ಎಎಸ್ 2009 (ಭಾ), ದಿನಾಂಕ: 12.04.2010.
3. ಸರ್ಕಾರದ ಆದೇಶ ಸಂಖ್ಯೆ: ವಇ 55 ಹೆಚ್ಎಹೆಚ್ 2013, ದಿನಾಂಕ: 27.12.2013.
4. ಸರ್ಕಾರದ ಆದೇಶ ಸಂಖ್ಯೆ: ವಇ 38 ಹೆಚ್ಎಹೆಚ್ 2013, ದಿನಾಂಕ: 26.06.2014.
5. ಸರ್ಕಾರದ ಆದೇಶ ಸಂಖ್ಯೆ: ವಇ 33 ಹೆಚ್ಎಹೆಚ್ 2016(ಭಾ–2), ದಿನಾಂಕ: 12.07.2016.
6. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ:RGRHCL/01/RSO/01/2017-18, dinAMk:20.04.2017.

ಪ್ರಸ್ತಾವನೆ:

2017–18ನೇ ಸಾಲಿನ ಆಯವ್ಯಯದ ಭಾಷಣದ ಕಂಡಿಕೆ 233ರಲ್ಲಿ ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡಂತೆ ಘೋಷಣೆ ಮಾಡಿರುತ್ತಾರೆ:–

"ಇಂದಿರಾ ಗ್ರಾಮೀಣ ವಸತಿ ನಿವೇಶನಗಳ ಯೋಜನೆ ಅಡಿಯಲ್ಲಿ 60:40 ಅನುಪಾತದಲ್ಲಿ ಖಾಸಗಿ ಭೂಮಾಲೀಕರ ಪಾಲುದಾರಿಕೆಯಲ್ಲಿ ಮನೆ ನಿವೇಶನಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ".

ಮೇಲೆ ಓದಲಾದ ಆದೇಶಗಳನ್ವಯ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತವು ಅನುಷ್ಠಾನಗೊಳಿಸುತ್ತಿರುವ ವಸತಿ ಯೋಜನೆಗಳಡಿ ವಸತಿ ಸೌಕರ್ಯ ಪಡೆಯಲು ಫಲಾನುಭವಿಯು ಸ್ವಂತ ನಿವೇಶನ ಹೊಂದಿರಬೇಕಾಗಿರುತ್ತದೆ. ಆದರೆ ಬಹಳಷ್ಟು ಕುಟುಂಬಗಳು ವಿವಿಧ ಕಾರಣಗಳಿಂದ ಸ್ವಂತ ನಿವೇಶನ ಹೊಂದಿರುವುದಿಲ್ಲ. ಇಂತಹ ಕುಟುಂಬಗಳಿಗೆ ನಿವೇಶನ ಒದಗಿಸಲು ಗ್ರಾಮೀಣ ಪ್ರದೇಶಗಳಲ್ಲಿ "ಗ್ರಾಮೀಣ ನಿವೇಶನ ಯೋಜನೆ"ಯಡಿ ಸ್ಥಳೀಯವಾಗಿ ಲಭ್ಯವಿರುವ ಸರ್ಕಾರಿ ಜಮೀನನ್ನು ನಿಯಮಾನುಸಾರ ಮಂಜೂರು ಮಾಡಿ ನಿವೇಶನ ಹಂಚಿಕೆ ಮಾಡಲಾಗುತ್ತಿದೆ. ಒಂದು ವೇಳೆ ಸರ್ಕಾರಿ ಜಮೀನು ಲಭ್ಯವಿಲ್ಲದ ಸಂದರ್ಭಗಳಲ್ಲಿ, ಉಲ್ಲೇಖ(5)ರ ದಿನಾಂಕ:12.07.2016ರ ಆದೇಶದಲ್ಲಿ ವಸತಿಗೆ ಸೂಕ್ತವಾದ ಖಾಸಗಿ ಜಮೀನನ್ನು ಜಿಲ್ಲಾ ಜಮೀನು ಖರೀದಿ ಸಮಿತಿಯ ಮೂಲಕ ಭೂಮಾಲೀಕರ ಸಹಮತದೊಂದಿಗೆ ಸರ್ಕಾರ ನಿಗದಿಪಡಿಸಿದ ದರಗಳಲ್ಲಿ ಖರೀದಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಹೀಗೆ ಮಂಜೂರಾತಿಯಾದ ಸರ್ಕಾರಿ/ಖರೀದಿಸಿದ ಖಾಸಗಿ ಜಮೀನುಗಳನ್ನು ಸರ್ಕಾರದ ಉಲ್ಲೇಖ(2)ರ ದಿನಾಂಕ:12.04.2010ರ ಆದೇಶದಲ್ಲಿನ ದರಗಳನ್ವಯ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಗರಿಷ್ಠ 30x40 ಚದರ ಅಡಿ ಅಳತೆ ನಿವೇಶನಗಳನ್ನು ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುತ್ತಿದೆ.

ಆದಾಗ್ಯೂ, ಜಮೀನಿನ ಮಾರ್ಗಸೂಚಿ ಬೆಲೆಗೂ ಮಾರುಕಟ್ಟೆ ಧಾರಣೆಗೂ ವ್ಯತ್ಯಾಸವಿದ್ದು ಸರ್ಕಾರ ನಿಗದಿಪಡಿಸಿರುವ ದರದಲ್ಲಿ ಭೂಮಾಲೀಕರು ಜಮೀನು ನೀಡಲು ಮುಂದೆ ಬಾರದೇ ಇರುವುದರಿಂದ ಕೆಲವು ಪ್ರದೇಶಗಳಲ್ಲಿ ಖಾಸಗಿ ಜಮೀನು ಖರೀದಿ ಸಾಧ್ಯವಾಗುತ್ತಿಲ್ಲ. ಆದರೂ ಅರ್ಹ ಕುಟುಂಬಗಳಿಗೆ ನಿವೇಶನ ಮತ್ತು ವಸತಿ ಸೌಕರ್ಯ ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಆದುದರಿಂದ, ಖಾಸಗಿ ಭೂಮಾಲೀಕರನ್ನು ಸರ್ಕಾರದ ವಸತಿ ಯೋಜನೆಯಂತೆ ನಿವೇಶನ ಯೋಜನೆಯಲ್ಲಿ ಭಾಗಿದಾರರನ್ನಾಗಿ ಮಾಡಿಕೊಂಡು ಸದರಿಯವರನ್ನು ವಸತಿ ಯೋಜನೆಗಾಗಿ ಜಮೀನು ನೀಡಲು ಒಪ್ಪಿದಲ್ಲಿ ಅದರಂತೆ ಸದರಿ ಜಮೀನಿನಲ್ಲಿ ನಿವೇಶನ ಮತ್ತು ವಸತಿ ಸೌಕರ್ಯ ಒದಗಿಸಲು ಭೂಮಾಲೀಕರ ಪಾಲುದಾರಿಕೆಯಲ್ಲಿ ಅಭಿವೃದ್ಧಿಪಡಿಸಿದ ಸದರಿ ಜಮೀನನ್ನು 60:40ರ ಅನುಪಾತದಲ್ಲಿ ಹಂಚಿಕೆ ಮಾಡಿಕೊಂಡು, ಭೂಮಾಲೀಕರಿಗೆ ಭೂ ಪರಿಹಾರವಾಗಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು

ರಾ.ಗ್ರಾ.ವ.ನಿ.ನಿ.
ಬೆಂಗಳೂರು.
19 JUN 2017
ಸ್ವೀಕೃತಿ

C-97498

ನೀಡುವ ಕ್ರಮವು ಒಂದು ಯೋಗ್ಯ ಕ್ರಮವೆಂದು ಭಾವಿಸಲಾಗಿದೆ. ಆದುದರಿಂದ, ನಿವೇಶನ ವಸತಿ ಯೋಜನೆಯಡಿ, ಖಾಸಗಿ ಜಮೀನಿನಲ್ಲಿ ಮೂಲಭೂತ ಸೌಕರ್ಯಗಳೊಂದಿಗೆ ಅಭಿವೃದ್ಧಿಪಡಿಸಿದ ಭಾಗವನ್ನು ಭೂ ಪರಿಹಾರ ಮೌಲ್ಯದ ಬದಲಾಗಿ 60:40 ಅನುಪಾತದಲ್ಲಿ ಭೂಮಾಲೀಕರಿಗೆ ಪರಿಹಾರವಾಗಿ ನೀಡಲು, ಸರ್ಕಾರದ ಅನುಮೋದನೆಯನ್ನು ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದವರು ಮೇಲೆ ಓದಲಾದ ಕ್ರಮಾಂಕ(6)ರ ಪತ್ರದಲ್ಲಿ ಪ್ರಸ್ತಾಪಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂ:ವಇ 50 ಹೆಚ್‌ಎಹೆಚ್ 2017
ಬೆಂಗಳೂರು ದಿನಾಂಕ:09ನೇ ಜೂನ್ 2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಅರ್ಹ ನಿವೇಶನರಹಿತ ಕುಂಟುಂಬಗಳಿಗೆ ನಿವೇಶನ ಒದಗಿಸಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರು ಅನುಷ್ಠನಗೊಳಿಸುತ್ತಿರುವ **"ಗ್ರಾಮೀಣ ನಿವೇಶನ ಯೋಜನೆ"** ಯನ್ನು "**ಇಂದಿರಾ ಗ್ರಾಮೀಣ ನಿವೇಶನಗಳ ಯೋಜನೆ**" ಎಂದು ಮರು ನಾಮಕರಣ ಮಾಡಿದೆ.

ಈ ಮಾರ್ಪಡಿತ ಇಂದಿರಾ ಗ್ರಾಮೀಣ ನಿವೇಶನಗಳ ಯೋಜನೆಗಾಗಿ, ಸ್ಥಳೀಯವಾಗಿ ಲಭ್ಯವಿರುವ ಸರ್ಕಾರಿ ಜಮೀನನ್ನು ನಿಯಮಾನುಸಾರ ಮಂಜೂರು ಮಾಡಿ ನಿವೇಶನ ಹಂಚಿಕೆಗೆ ಕ್ರಮವಹಿಸುವುದು. ಒಂದು ವೇಳೆ ಸರ್ಕಾರಿ ಜಮೀನು ಲಭ್ಯವಿಲ್ಲದ ಸಂದರ್ಭಗಳಲ್ಲಿ ಉಲ್ಲೇಖ(3)ರ ಆದೇಶದಲ್ಲಿ ವಸತಿಗೆ ಸೂಕ್ತವಾದ ಖಾಸಗಿ ಜಮೀನನ್ನು ಜಿಲ್ಲಾ ಜಮೀನು ಖರೀದಿ ಸಮಿತಿಯ ಮೂಲಕ ಭೂಮಾಲೀಕರ ಸಹಮತದೊಂದಿಗೆ ಸರ್ಕಾರ ನಿಗದಿಪಡಿಸಿದ ದರಗಳಲ್ಲಿ ಖರೀದಿಸಲು ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಜಮೀನು ಖರೀದಿಸಿ ನಿವೇಶನ ಹಂಚಿಕೆಗೆ ಕ್ರಮವಹಿಸುವುದು.

ಆದಾಗ್ಯೂ ಜಮೀನಿನ ಮಾರ್ಗಸೂಚಿ ಬೆಲೆ ಹಾಗೂ ಮಾರುಕಟ್ಟೆ ಧಾರಣೆಗೂ ವ್ಯತ್ಯಾಸವಿದ್ದು ಸರ್ಕಾರ ನಿಗದಿಪಡಿಸಿರುವ ದರದಲ್ಲಿ ಭೂಮಾಲೀಕರು ಜಮೀನು ನೀಡಲು ಮುಂದೆ ಬಾರದೇ ಇದ್ದ ಸಂದರ್ಭಗಳಲ್ಲಿ ಭೂ ಮಾಲೀಕರ ಪಾಲುದಾರಿಕೆಯಲ್ಲಿ ಜಮೀನನ್ನು ನಿವೇಶನಗಳನ್ನಾಗಿ ಅಭಿವೃದ್ಧಿಪಡಿಸಿ, ಸರ್ಕಾರವು ಈಗಾಗಲೇ ಹೊರಡಿಸಿರುವ ಮೂಲಭೂತ ಸೌಕರ್ಯ ಯೋಜನೆಯಂತೆ, ಅಗತ್ಯ ಮೂಲಭೂತ ಸೌಕರ್ಯದೊಂದಿಗೆ ಅಭಿವೃದ್ಧಿಪಡಿಸಿದ ಜಮೀನನ್ನು 60:40ರ ಅನುಪಾತದಲ್ಲಿ ಪರಿಹಾರವಾಗಿ ನೀಡುವ ಕ್ರಮವನ್ನು ಅನುಸರಿಸುವುದು. ಇದರನ್ವಯ ಅಭಿವೃದ್ಧಿಪಡಿಸಿದ ಜಮೀನಿನಲ್ಲಿ ನಿವೇಶನಗಳ ಹಂಚಿಕೆ ಸರ್ಕಾರಕ್ಕೆ ಶೇಕಡ 60 ಹಾಗೂ ಭೂ ಮಾಲೀಕರಿಗೆ ಶೇಕಡ 40ರ ಅನುಪಾತದಂತೆ ನಿವೇಶನಗಳ ಹಂಚಿಕೆಗೆ ಸರ್ಕಾರದ ಅನುಮೋದನೆ ನೀಡಿದೆ.

ಜಮೀನನ್ನು, ಮೂಲಭೂತ ಸೌಕರ್ಯಗಳೊಂದಿಗೆ ಅಭಿವೃದ್ಧಿಪಡಿಸಲು ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ: 2216-02-800-0-03-059(ಮೂಲಭೂತ ಸೌಕರ್ಯ ಯೋಜನೆಯಡಿ)ರಡಿ ಮತ್ತು ಲೆಕ್ಕ ಶೀರ್ಷಿಕೆ:2216-03-102-0-01(ಗ್ರಾಮೀಣ ನಿವೇಶನ ಯೋಜನೆ)ರಡಿ ಭರಿಸುವುದು.

ಜಮೀನು ಖರೀದಿ, ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಈಗಾಗಲೇ ಹೊರಡಿಸಿರುವ ಸುತ್ತೋಲೆ ಹಾಗೂ "**ಮನೆ**" ಪುಸ್ತಕದಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸುವುದು.

ಈ ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇಂದಿರಾ ಗ್ರಾಮೀಣ ವಸತಿ ನಿವೇಶನಗಳ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವಂತೆ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ.ಸಂಖ್ಯೆ:389 ವೆಚ್ಚ-9/2017, ದಿನಾಂಕ:02.06.2017 ಮತ್ತು ಯೋಜನಾ ಇಲಾಖೆಯ ಅ.ಟಿ.ಸಂಖ್ಯೆ. ಯೋಇ 57 ಜಿಯೋವಿ 2017, ದಿನಾಂಕ:08.06.2017ರಲ್ಲಿ ನೀಡಲಾದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶಿವಕುಮಾರಸ್ವಾಮಿ ಸಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ-2,
ವಸತಿ ಇಲಾಖೆ.

ಇವರಿಗೆ

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್ಎಸ್ಎ) (ಇ&ಆರ್ಎಸ್ಎ) ಕರ್ನಾಟಕ, ಬೆಂಗಳೂರು,
2. ಮಹಾಲೇಖಪಾಲರು (ಎ&ಇ) ಕರ್ನಾಟಕ, ಬೆಂಗಳೂರು,
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ,
4. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ನಗರಾಬಿವೃದ್ಧಿ ಇಲಾಖೆ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.
7. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
8. ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ,
9. ಸರ್ಕಾರದ ಕಾರ್ಯದರ್ಶಿ, (ಪುರಸಭೆ ಮತ್ತು ಪೌರಾಡಳಿತ) ನಗರಾಭಿವೃದ್ಧಿ ಇಲಾಖೆ, ವಿಕಾಸೌಧ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು,
11. ಎಲ್ಲಾ ಜಿಲ್ಲಾಧಿಕಾರಿಗಳು,
12. ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
13. ಶಾಖಾ ರಕ್ಷಾ ಕಡತ,
14. ಹೆಚ್ಚುವರಿ ಪ್ರತಿ.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ,
2. ಮಾನ್ಯ ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ,
3. ಮಾನ್ಯ ವಸತಿ ಸಚಿವರ ಆಪ್ತ ಕಾರ್ಯದರ್ಶಿ,
4. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ,
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ,
6. ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಸಹಾಯಕರು, ವಸತಿ ಇಲಾಖೆ.